# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿದ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳ ಮತ್ತು ಅವುಗಳ ವ್ಯಾಪ್ತಿಯ ಇತರೆ ಇಲಾಖೆಗಳಲ್ಲಿ ಯೋಜನೇತರ ಕಾರ್ಯಕ್ರಮದಡಿ ವೇತನ ವೆಚ್ಚಕ್ಕಾಗಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಆರ್ಥಿಕ ಇಲಾಖೆ ಕಡತ ಸಂಖ್ಯೆ: ಆಇ 147 ಮತ್ತು 206 ವೆಚ್ಚ 4/2017

**ಪ್ರಸ್ತಾವನೆ:**

ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳ ಮತ್ತು ಅವುಗಳ ವ್ಯಾಪ್ತಿಯ ಇತರೆ ಇಲಾಖೆಗಳಲ್ಲಿ ಯೋಜನೇತರ ಕಾರ್ಯಕ್ರಮಗಳಡಿ ತೆರವಾಗಿದ್ದ ಅಧಿಕಾರಿ/ಸಿಬ್ಬಂದಿಯವರುಗಳ ಹುದ್ದೆಗಳು ಭರ್ತಿಯಾದ್ದರಿಂದ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ವೆಚ್ಚಕ್ಕಾಗಿ, ಹೊರಗುತ್ತಿಗೆ/ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ಹಾಗೂ ಚಾರ್ಟರ್ಡ್ ಅಕೌಂಟೆಂಟ್‌ರವರ ಗೌರವ ಸಂಭಾವನೆಗಾಗಿ ಮತ್ತಿತರೆ ಅಗತ್ಯ ವೇತನೇತರ ವೆಚ್ಚಕ್ಕಾಗಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿ ರೂ.62.00ಲಕ್ಷಗಳನ್ನು ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಡಿ ರೂ.265.10ಲಕ್ಷ ಒಟ್ಟು ರೂ.328.10ಲಕ್ಷ ಅನುದಾನವನ್ನು ಒದಗಿಸಲು ಪ್ರಸ್ತಾವಿಸಿದ್ದು ಸದರಿ ಅನುದಾನವನ್ನು 2515–00–196–1–05–300 ಮತ್ತು 2515–00–197–1–10–300(ಯೋಜನೇತರ) ಅಡಿ ಲಭ್ಯವಿರುವ ಅನುದಾನದಿಂದ ಅನುಕ್ರಮವಾಗಿ ರೂ.62.00ಲಕ್ಷ ಮತ್ತು ರೂ.265.10ಲಕ್ಷ ಒಟ್ಟು ರೂ.328.10ಲಕ್ಷಗಳನ್ನು ಬಿಡುಗಡೆಗೊಳಿಸುವಂತೆ ನಿರ್ಣಯಿಸಲಾಗಿದೆ. ಅದರನ್ವಯ ಕೆಳಕಂಡಂತೆ ಆದೇಶಿಸಲಾಗಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 166 ವೆಚ್ಚ 6/2017 ದಿನಾಂಕ:10ನೇ ಮಾರ್ಚ್ 2017

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಕೆಳಕಂಡ ಅನುಬಂಧದ ಕಾಲಂ 2 & 3ರ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳಿಗೆ ಕಾಲಂ 4 ಕಾರ್ಯಕ್ರಮದಡಿಯಲ್ಲಿ ಕಾಲಂ 5 ಮತ್ತು 6ರನ್ವಯ 2515–00–196–1–05–300 ಮತ್ತು 2515–00–197–1–10–300 (ಯೋಜನೇತರ) ಅಡಿ ಕಾಲಂ 7ರನ್ವಯ ಒಟ್ಟು ಅನುದಾನ ರೂ.328.10ಲಕ್ಷ (ರೂಪಾಯಿ ಮೂರು ನೂರ ಇಪ್ಪತ್ತೆಂಟು ಲಕ್ಷದ ಹತ್ತು ಸಾವಿರಗಳು ಮಾತ್ರ) ಅಡಿ ಬಿಡುಗಡೆಗೊಳಿಸಲಾಗಿದೆ. ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಮೇಲೆ (1)ರಲ್ಲಿ ಓದಲಾದ ಸುತ್ತೋಲೆಯಲ್ಲಿ ನೀಡಿದ ನಿರ್ದೇಶನದಂತೆ ಕ್ರಮವಹಿಸಿ ವೇತನ ಬಿಲ್ಲುಗಳ ತೀರುವಳಿಗೆ ಕ್ರಮವಹಿಸತಕ್ಕದ್ದು. ಪ್ರಸ್ತುತ ಪ್ರಕರಣಕ್ಕೆ ಆರ್ಥಿಕ ಇಲಾಖೆ ಮರುಹೊಂದಾಣಿಕೆಗೆ ಸಹಮತಿಸಿದೆ ಎಂದು ಭಾವಿಸತಕ್ಕದ್ದು.

| ಕ್ರ. ಸಂ. | ಜಿಲ್ಲೆ/ಜಿಲ್ಲಾ ಪಂಚಾಯತ್ | ತಾಲ್ಲೂಕು ಪಂಚಾಯತ್ | ಯೋಜನೇತರ ಕಾರ್ಯಕ್ರಮದ ಲೆಕ್ಕಶೀರ್ಷಿಕೆ | ಬಿಡುಗಡೆಗೊಳಿಸಿದ ಲೆಕ್ಕ ಶೀರ್ಷಿಕೆ | | ಒಟ್ಟು |
|---|---|---|---|---|---|---|
| | | | | 2515–00–196–1–05–300 | 2515–00–197–1–10–300 | |
| 1 | 2 | 3 | 4 | 5 | 6 | 7 |
| 1 | ಚಿಕ್ಕಮಗಳೂರು | | 2202–00–101–0–27–050 | 10.00 | | **10.00** |
| 2 | ಹಾವೇರಿ | | 2515–00–101–0–28–050 | 52.00 | | **52.00** |
| 3 | | ಹುಣಸೂರು | 2435–00–101–0–61–001 | | 10.81 | **10.81** |
| 4 | | ಧಾರವಾಡ | 2515–00–102–0–61–001 | | 15.00 | **15.00** |
| 5 | | ಚಿಕ್ಕಮಗಳೂರು | 2202–00–101–0–63–001<br>2202–00–102–0–62–001<br>2202–00–101–0–64–001 | | 7.60<br>32.50<br>39.60 | **79.70** |
| 6 | | ಮೂಡಗೆರೆ | 2515–00–102–0–61–050 | | 15.00 | **15.00** |
| 7 | | ಶಿರಹಟ್ಟಿ | 2515–00–102–0–61–001<br>2515–00–102–0–61–050 | | 43.81<br>10.14 | **53.95** |
| 8 | | ಸಾಗರ | 2515–00–102–0–61–001 | | 44.00 | **44.00** |
| 9 | | ದಾವಣಗೆರೆ | 2515–00–102–0–61–050 | | 18.48 | **18.48** |
| 10 | | ಮೈಸೂರು | 2202–00–101–0–64–001<br>2202–00–102–0–62–001 | | 1.16<br>5.00 | **6.16** |
| 11 | | ಹೆಚ್.ಡಿ.ಕೋಟೆ | 2202–00–101–0–64–001 | | 4.00 | **4.00** |
| 12 | | ಟಿ.ನರಸೀಪುರ | 2202–00–102–0–62–001 | | 5.00 | **5.00** |
| 13 | | ವೀರಾಜಪೇಟೆ | 2403–00–101–0–61–001 | | 14.00 | **14.00** |
| | | | **ಒಟ್ಟು** | **62.00** | **265.10** | **328.10** |

(ಸೂಚನೆ: ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ–2ಕ್ಕೆ ಜಮೆ ಮಾಡಿಕೊಂಡು, ನಂತರ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಮರು ಹೊಂದಾಣಿಕೆ ಆದೇಶವನ್ನು ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರುರವರಿಗೆ ಸುತ್ತೋಲೆರನ್ವಯ ಪ್ರಸ್ತಾವನೆ ಸಲ್ಲಿಸಿ ಖಜಾನೆಯಲ್ಲಿ ಅಪ್‌ಲೋಡ್ ಮಾಡಿಕೊಳ್ಳುವುದು)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಪುರುಷೋತ್ತಮ್ ಸಿಂಗ್ ಬಿ.ಹೆಚ್.)**
ವಿಶೇಷಾಧಿಕಾರಿ(ಜಿ.ಪಂ.),
ಆರ್ಥಿಕ ಇಲಾಖೆ

1. ಮಹಾಲೇಖಪಾಲರು (ಎ&ಇ), ಲೆಕ್ಕ ಪರಿಶೋಧನೆ 1&2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಕೃಷಿ/ಶಿಕ್ಷಣ/ಗ್ರಾಅಪ ಇಲಾಖೆ
3. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು,
4. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಸಂಬಂಧಪಟ್ಟ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು
6. ಸಂಬಂಧಪಟ್ಟ ಜಿಲ್ಲಾ/ಉಪ ಖಜಾನೆ ಅಧಿಕಾರಿಗಳು
7. ರಕ್ಷಾ ಕಡತಕ್ಕೆ
8. ಹೆಚ್ಚುವರಿ ಪ್ರತಿ